ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಮೇಲಿನ ಅಧಿಕಾರಿಗಳಿಂದ ಕೆಳಮಟ್ಟದವರೆಗೂ ಶಾಮೀಲಾಗಿರುವಂಥಾದ್ದು ನಿಜ. ಮೇಲಿನ ಅಧಿಕಾರಿಗಳ ಸಹಕಾರವಿಲ್ಲದೆ ಕೆಳಗಿನ ಅಧಿಕಾರಿಗಳು ಈ ರೀತಿಯಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವಂಥಾದ್ದಕ್ಕೆ ನಾನು ಈಗಾಗಲೇ ಇಲಾಖೆಯ ಕಾರ್ಯದರ್ಶಿಯವರಿಗೆ ನಿರ್ದೇಶನವನ್ನು ನೀಡಿದ್ದೇನೆ. ಅವರು ಪಿರಿಯಾಡಿಕಲ್ ಆಗಿ ಚೆಕ್ ಮಾಡಬೇಕಾಗುತ್ತದೆ. ಅವರ ಜಾಬ್ ಚಾರ್ಟ್ ಇರುತ್ತದೆ ಆ ಪ್ರಕಾರವಾಗಿ ಕೆಲಸ ಮಾಡಬೇಕಾಗುತ್ತದೆ.

ಅಧ್ಯಕ್ಷರು : ಯಾರು ಯಾರು ತಪ್ಪು ಮಾಡಿದ್ದಾರೆ ಅವರನ್ನು ಹಿಡಿಯಿರಿ.

ಶ್ರೀ ಸಿ. ಬೈರೇಗೌಡರು : ಮಾನ್ಯ ಅಧ್ಯಕ್ಷರೆ, ಮಾನ್ಯ ಕರ್ಕಿಯವರು ಸೂಚನೆ ಕೊಟ್ಟ ಹಾಗೆ ನಾನು ಅವರ ಕ್ಷೇತ್ರಕ್ಕೂ ಹೋಗಿ ಬೆಟ್ಟಗುಡ್ಡವನ್ನೆಲ್ಲಾ ಸುತ್ತಿದ್ದೇನೆ. ಅವರು ಅಲ್ಲಿ ಗಿಡವನ್ನು ಹಾಕಿದ್ದೇವೆಂದು ಹೇಳುತ್ತಾರೆ. ನಾನು ಅದನ್ನು ಹುಡುಕಿ ಹುಡುಕಿ ಸಾಕಾಯಿತು, ಅದು ಸಿಗಲಿಲ್ಲ. ಕೊನೆಗೆ ಅಲ್ಲಿ ಒಂದು ಸೀಬೆಗಿಡ ಕಾಣಿಸಿತು. ನೋಡಿ ಸಾರ್ ಇಲ್ಲಿ ಹಾಕಿದ್ದೇವೆಂದು ಅಧಿಕಾರಿಗಳು ತೋರಿಸಿದರು. ಅದರಲ್ಲಿ 3-4 ಎಲೆಗಳು ಮಾತ್ರ ಇತ್ತು. ಅದು ನನಗೆ ಅರ್ಥವಾಗಲಿಲ್ಲ, ಏಕೆಂದರೆ ಅಷ್ಟು ಮಳೆ ಬರುವಂತಹ ಪ್ರದೇಶದಲ್ಲಿ ಸೀಬೆ ಗಿಡವನ್ನು ಹಾಕಿದರೆ ಅದು ಬರುವುದಿಲ್ಲ. ಅಷ್ಟೂ ವಿವೇಚನೆ ಇಲ್ಲದೇ ಕೆಲಸವನ್ನು ಮಾಡಿದ್ದಾರೆ. ಅಲ್ಲಿ ಮಾಡಿರತಕ್ಕಂಥಾದ್ದು ತಡೆಯಾಣೆಯಲ್ಲ, ಅದು ಕಿಂಡಿ ಯಾಣೆಯಾಗಿದ್ದು, ಅಲ್ಲಿ ನಾನು ನೋಡಿರತಕ್ಕಂಥಾದ್ದು ಕಿಂಡಿಯಾಣೆ ಕೆಲಸವೂ ಸರಿಯಾಗಿದೆ. ಆ ಕೆಲಸವು ಕ್ವಾಲಿಟಿ ಆಫ್ ವರ್ಕ್ ಆಗಿದ್ದು ಅದಕ್ಕೆ ಹಲಗೆಯನ್ನು ಹಾಕಿರಲಿಲ್ಲ. ಇವತ್ತು ರೈತರು ಹಲಗೆಯನ್ನು ಹಾಕಿಕೊಳ್ಳುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಆ ಕಾರಣದಿಂದ ಆ ಕೆಲಸವನ್ನು ಮಾಡಿರಲಿಲ್ಲ. ಅಲ್ಲಿ ಟ್ರೆಂಚ್ ಮಾಡಿದ್ದಾರೆ ಆದರೆ ಯಾವ ಗಿಡವನ್ನು ಎಲ್ಲಿ ಹಾಕಬೇಕೆಂದು ವಿವೇಚನೆ ಇಲ್ಲದೇ ಕೆಲಸವನ್ನು ಮಾಡಿದ್ದಾರೆ.

ಡಾ||ಎಂ. ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ನಾನು ಹೋದಾಗ ಅಲ್ಲಿ ಗಿಡವನ್ನೇ ಹಾಕಿರಲಿಲ್ಲ. ಅಲ್ಲಿ ಒಂದೇ ಒಂದು ಗಿಡವನ್ನು ಹಾಕಿದ್ದರು.

ಶ್ರೀ ಸಿ. ಬೈರೇಗೌಡ : ಅದನ್ನು ನಾನೇ ಹೇಳಿದ್ದೇನೆಲ್ಲಾ, ಅಲ್ಲಿ ಯಾವ ಗಿಡವನ್ನು ಎಲ್ಲಿ ಹಾಕಬೇಕೆಂಬ ವಿವೇಚನೆ ಇಲ್ಲದೇ ಕೆಲಸವನ್ನು ಮಾಡಿದ್ದಾರೆ.

ಮೇಲುಕೋಟೆಯಲ್ಲಿ ಗ್ರಾಮೀಣಾಭಿವೃದ್ಧಿ ಸಂಸ್ಥೆ (ವಿಕಾಸನ)

476 - ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಮೇಲುಕೋಟೆ ಗ್ರಾಮದಲ್ಲಿ ಇರುವ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ವಿಕಾಸನ)ಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಇಂದಿರಾ, ಆಶ್ರಯ ಯೋಜನೆಯಲ್ಲಿ ನಬಾರ್ಡ್ ವತಿಯಿಂದ ಮನೆ ನಿರ್ಮಾಣ ಮಾಡಿಕೊಂಡು ಯಾವ ಯಾವ ಸಾಲಿನಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?

ಆ) ಈ ಹಣವನ್ನು ಯಾವ ಯಾವ ಹಳ್ಳಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡಲಾಗಿದೆ. (ಗ್ರಾಮಪಂಚಾಯಿತಿವಾರು ವಿವರ ನೀಡುವುದು)?

ಇ) ಈ ಯೋಜನೆಯಿಂದ ಬಿಡುಗಡೆಯಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡದೆ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಆ) ರಾಜ್ಯ ಸರ್ಕಾರ ವಸತಿ ಇಲಾಖೆಯಿಂದ ಸದರೀ ಸಂಸ್ಥೆಗೆ ಮನೆ ನಿರ್ಮಾಣ ಮಾಡಲು ಆರ್ಥಿಕ ಸಹಾಯ ನೀಡಿರುವುದಿಲ್ಲ. ಸರ್ಕಾರವಾಗಲೀ ಜಿಲ್ಲಾ ಪಂಚಾಯತ್ ಆಗಲೀ ಮೇಲೆ ಕಂಡ ಸಂಸ್ಥೆಗೆ ನೆರವು ನೀಡಲು ಪುರಸ್ಕರಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

11.40 ಎ.ಎಂ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಸಭಾಧ್ಯಕ್ಷರೆ, ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಮೇಲುಕೋಟೆ ಗ್ರಾಮದಲ್ಲಿ ಇರುವ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ವಿಕಾಸನ)ಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಇಂದಿರಾ, ಆಶ್ರಯ ಯೋಜನೆಯಲ್ಲಿ ನಬಾರ್ಡ್ ವತಿಯಿಂದ ಮನೆ ನಿರ್ಮಾಣ ಮಾಡಿಕೊಡಲು ಯಾವ ಯಾವ ಸಾಲಿನಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಅದಕ್ಕೆ ವಸತಿ ಇಲಾಖೆಯವರು ರಾಜ್ಯ ಸರ್ಕಾರ ವಸತಿ ಇಲಾಖೆಯಿಂದ ಸದರಿ ಸಂಸ್ಥೆಗೆ ಮನೆ ನಿರ್ಮಾಣ ಮಾಡಲು ಆರ್ಥಿಕ ಸಹಾಯ ನೀಡಿರುವುದಿಲ್ಲ. ಸರ್ಕಾರವಾಗಲಿ / ಜಿಲ್ಲಾ ಪಂಚಾಯತ್ ಆಗಲಿ ಮೇಲ್ಕಂಡ ಸಂಸ್ಥೆಗೆ ನೆರವು ನೀಡಲು ಪುರಸ್ಕರಿಸುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಎರಡನೆಯ ಪ್ರಶ್ನೆ ಈ ಹಣವನ್ನು ಯಾವ ಯಾವ ಹಳ್ಳಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡಲಾಗಿದೆ (ಗ್ರಾಮೀಣ ಪಂಚಾಯಿತಿಯವಾರು ವಿವರ ನೀಡುವುದು) ಎಂದು ಕೇಳಿದ್ದಕ್ಕೆ ಉದ್ಭವಿಸುವುದಿಲ್ಲವೆಂದು ಉತ್ತರ ನೀಡಿದ್ದಾರೆ. ಮೂರನೆಯದು, ಈ ಯೋಜನೆಯಿಂದ ಬಿಡುಗಡೆಯಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡದೆ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ, ಉದ್ಭವಿಸುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ನಾಲ್ಕನೆಯದು, ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು ಎಂದು ಕೇಳಿದ್ದಕ್ಕೆ, ಅದಕ್ಕು ಉದ್ಭವಿಸುವುದಿಲ್ಲವೆಂದು ಉತ್ತರ ನೀಡಿದ್ದಾರೆ. ಅಧ್ಯಕ್ಷರೆ, ಕೇಂದ್ರ ಸರ್ಕಾರದಿಂದ ಬರುವ ಹಣವನ್ನು ಜಿಲ್ಲಾ ಪಂಚಾಯಿತಿಯವಲ್ಲಿ ಏನೇನು

ಕಾರ್ಯಕ್ರಮವಿದೆ ಅದಕ್ಕೆ ಉಪಯೋಗಿಸುವ ರೀತಿಯಲ್ಲಿ ಅವ್ಯವಹಾರ ನಡೆದಿದೆ, ಇದರ ಬಗ್ಗೆ ಸರ್ಕಾರದ ಕ್ರಮವೇನು ಎಂದು ನಾನು ಪ್ರಶ್ನೆ ಕೇಳಿದ್ದೆ ಅದಕ್ಕೆ ಸಂಬಂಧವಿಲ್ಲ, ಉದ್ಭವಿಸುವುದಿಲ್ಲ, ಹಣ ತಿಂದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ ಎಂದು ಪ್ರಶ್ನೆಗೆ ಉತ್ತರ ಕೊಟ್ಟರೆ ನನಗೆ ಅರ್ಥವಾಗುತ್ತಿಲ್ಲ, ರೈಲ್ವೆ ಕಂಬಿಯನ್ನು ಬಿಚ್ಚಿಕೊಂಡು ಗಾಡಿಯಲ್ಲಿ ಇಟ್ಟುಕೊಂಡು ಹೋಗುತ್ತಿದ್ದಾರೆಂದರೆ ಅದು ಕೇಂದ್ರ ಸರ್ಕಾರದ್ದು ಅದು ರಾಜ್ಯ ಸರ್ಕಾರದಲ್ಲವೆಂದು ತಾವು ಉದ್ಭವಿಸುವುದಿಲ್ಲವೆಂದು ಉತ್ತರ ಕೊಟ್ಟರೆ ಆ ಅನ್ಯಾಯವನ್ನು ಯಾವ ರೀತಿ ತಡೆಯಬಹುದೆಂಬುದರ ಬಗ್ಗೆ ತಾವು ಉತ್ತರ ಕೊಡಿ.

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಸಚಿವರು, ವಸತಿ ಸಚಿವರ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಕೇಳಿರುವುದು, ನಬಾರ್ಡ್‌ನಿಂದ ಈ ಅಂಬೇಡ್ಕರ್ ಅಥವಾ ವಸತಿಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆಂದು ಕೇಳಿದ್ದಾರೆ. ಆಶ್ರಯ ಯೋಜನೆಯಡಿಯಲ್ಲಿ ವಿಕಾಸ ಸಂಸ್ಥೆಗೆ ಹಣ ನೀಡಿಲ್ಲ. ಈ ವಿಕಾಸ ಸಂಸ್ಥೆಗೆ ನಬಾರ್ಡ್ ಮುಖಾಂತರ ಹಣ ನೀಡಿಲ್ಲವೆಂದು ಉತ್ತರ ನೀಡಿದ್ದೇವೆಯೇ ಹೊರತು ನಾವು ಬೇರೆ ಪ್ರಶ್ನೆಗೆ ಉತ್ತರವನ್ನು ಕೊಟ್ಟಿಲ್ಲ. ನಬಾರ್ಡ್‌ನಿಂದ ಆಶ್ರಯ ಯೋಜನೆಯಡಿಯಲ್ಲಿ ವಿಕಾಸ ಸಂಸ್ಥೆಗೆ ಹಣ ನೀಡಿಲ್ಲ, ಅದಕ್ಕೆ ನಾವು ಮನೆ ಕಟ್ಟುವುದಕ್ಕಾಗಿಲ್ಲ ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದೇವೆ. ಜಿಲ್ಲಾಪಂಚಾಯಿತಿಯಿಂದ ಆಶ್ರಯ, ಅಂಬೇಡ್ಕರ್, ಇಂದಿರಾ ಬೇರೆ ಮನೆಗಳನ್ನು ಕಟ್ಟುತ್ತಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಕೇಂದ್ರ ಸರ್ಕಾರದಿಂದ ಈ ಸ್ವಯಂಸೇವಾ ಸಂಸ್ಥೆಗೆ ನಾನು ಹೇಳುತ್ತಿರತಕ್ಕಂಥ ಕಾರ್ಯಕ್ರಮಕ್ಕೆ ಹಣವನ್ನು ಕೊಡುತ್ತಾರೆಯೇ?

ಅಧ್ಯಕ್ಷರು : ಅದು ಇವರಿಗೆ ಗೊತ್ತಿರುವುದಿಲ್ಲ. ಸ್ವಯಂ ಸೇವಾ ಸಂಸ್ಥೆಗಳವರು ಏನಿದ್ದಾರೆ ಅವರು ನೇರವಾಗಿ ಸರ್ಕಾರದಿಂದ ಹಣವನ್ನು ಪಡೆದುಕೊಂಡಿರುತ್ತಾರೆ. ಅದು ಸರ್ಕಾರದ ಯಾವುದೇ ಅಂಗಸಂಸ್ಥೆಯಾದ ಜಿಲ್ಲಾಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ರಾಜ್ಯ ಸರ್ಕಾರದಿಂದ ವಿತರಣೆಯಾಗಿದ್ದರೆ ಮಾತ್ರ ಅವರ ಗಮನಕ್ಕೆ ಬರುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ, ಅದು ನಬಾರ್ಡ್ ಸಂಸ್ಥೆಯಲ್ಲಿ ಪ್ರಾಯಶಃ ಕಪಾರ್ಟ್‌ನಿಂದ ಅದು ಬಂದಿರುವುದು. ನಬಾರ್ಡ್ ಸಂಸ್ಥೆಯವರು ಈ ರೀತಿಯ ಸ್ವಯಂ ಸೇವಾ ಸಂಸ್ಥೆಗಳಿಗೆ ಹಣವನ್ನು ಕೊಡುವುದಿಲ್ಲ. ಕಪಾರ್ಟ್ ಸಂಸ್ಥೆಗೆ ಬಹುಶಃ ಆ ವಿಕಾಸನ ಸಂಸ್ಥೆಗೆ ಬಂದಿರುತ್ತದೆ. ಇತ್ತೀಚೆಗೆ ನಮ್ಮಲ್ಲಿ ಬಹಳ ಅವ್ಯವಹಾರಗಳಾಗಿದ್ದಾವೆನ್ನುವುದಕ್ಕೆ, ಕೋಲಾರದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ತನಿಖೆಯನ್ನು ಮಾಡಿದರು. ಆದಾದ ಮೇಲೆ ಈ ವರ್ಷದಿಂದ ಕಪಾರ್ಟ್ ಸಂಸ್ಥೆಯವರು, ಈ ರೀತಿಯಾಗಿ ಯಾವುದೇ ಮನೆಗಳನ್ನು ಕಟ್ಟಿಸುವುದಕ್ಕೆ ಹಣ ಕೊಡಬಾರದೆನ್ನುವುದು ಕೂಡ ಇದೆ ಮತ್ತೆ ನಮ್ಮ ಇಸ್ಪರ್ ಆಫ್ ಅಸೋಸಿಯೇಷನ್ ಕೆಳಗೆ ನಾವು ಇವರೇನಾದರೂ ಪ್ರತಿವರ್ಷದ ಅಂದಾಜು ಪಟ್ಟಿಯನ್ನು ಕಳುಹಿಸಿಕೊಟ್ಟಿದ್ದಾರೆಯೇ ಇಲ್ಲವೇ ಎನ್ನುವುದನ್ನೂ ಕೂಡ ನೋಡುವುದಕ್ಕೆ ಸಾಧ್ಯತೆ ಇದೆ. ಆ ಬಗ್ಗೆ ನಾವು ತನಿಖೆಯನ್ನು ಮಾಡಿಸುವುದಕ್ಕೆ ಸಾಧ್ಯತೆ ಇದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ತಮ್ಮ ಮೂಲಕ ಮನವಿ ಮಾಡುವುದೇನೆಂದರೆ, ವಿಕಾಸನ ಸಂಸ್ಥೆಯಿಂದ ಪಾಂಡವಪುರ ತಾಲ್ಲೂಕಿನಲ್ಲಿ ಆಗಿರತಕ್ಕಂಥ ಕಾರ್ಯಕ್ರಮದ ಬಗ್ಗೆ ತಪಾಸಣೆ ಮಾಡಿ ಸತ್ಯಶೋಧನೆ ಮಾಡಿ, ವಾಸ್ತವಿಕವಾಗಿ ಅನ್ಯಾಯವನ್ನು ಕಂಡುಹಿಡಿದು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ತಿಪ್ಪೇಸ್ವಾಮಿ : ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಅದನ್ನು ಮಾಡುತ್ತಾರೆ, ಶಿವಕುಮಾರ್‌ರವರು ಗೈರು ಹಾಜರಿದ್ದಾರೆ, ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು ತಡೆಹಿಡಿಯಲಾದ ಪ್ರಶ್ನೆಯನ್ನು ಕೇಳುವುದು.

ಐಸಿಡಿಎಸ್ ಯೋಜನೆಯಡಿ ಅವ್ಯವಹಾರ

506 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. *ಐಸಿಡಿಎಸ್ ಯೋಜನೆಯಡಿ ಅವ್ಯವಹಾರ ನಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ. *ಇದರ ತನಿಖೆಗೆ ನೇಮಿಸಿದ ಆಗವಾನೆರವರ ಏಕ ಸದಸ್ಯ ಸಮಿತಿ ವರದಿ ಸಲ್ಲಿಸಿದೆಯೆ?*

ಇ. *ಏಕ ಸದಸ್ಯ ಸಮತಿಯ ವರದಿಯ ಶಿಫಾರಸ್ಸುಗಳೇನು?*

ಈ. *ಇದನ್ನು ಪ್ರಕಟಗೊಳಿಸದರಿಲು ಕಾರಣಗಳೇನು?*

ಉ. *ಸಮಿತಿಯ ವರದಿಯ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ. ಹೌದು.

ಆ. ಸಮಿತಿಯನ್ನು ನೇಮಕ ಮಾಡಿರುವುದಿಲ್ಲ. ಆದರೆ ಈ ಬಗ್ಗೆ ತನಿಖೆ ನಡೆಸಲು ಹಿರಿಯ ಐ.ಎ.ಎಸ್ ಅಧಿಕಾರಿ ಶ್ರೀ ಬಿ.ಎಸ್. ಆಗವಾನೆ ಇವರನ್ನು ನೇಮಕ ಮಾಡಲಾಗಿದ್ದು, ಅವರು ವರದಿ ಸಲ್ಲಿಸಿರುತ್ತಾರೆ.

ಇ. ಶ್ರೀ ಆಗವಾನೆ ವರದಿಯ ಶಿಫಾರಸ್ಸುಗಳು ಈ ರೀತಿ ಇದೆ:-

1. ನಂದಿ ಆಗ್ರೋ ಪ್ರೈವೆಟ್ ಲಿಮಿಟೆಡ್, ಕೋಲಾರ ಇವರಿಗೆ ನೀಡಲಾಗಿರುವ ಪಡಿತರ ಗೋಧಿ ಹಂಚಿಕೆಯನ್ನು ಹಿಂದಕ್ಕೆ ಪಡೆಯುವುದು.

2. ನಂದಿ ಆಗ್ರೋ, ಕೋಲಾರ ಇವರಿಗೆ ಹೆಚ್ಚಿಗೆ ನೀಡಲಾಗಿರುವ ಹಣವನ್ನು ವಸೂಲಿ ಮಾಡುವುದು.